ಆಲ್ಬರ್ಟ್ ಹೇಳಿದ.

ಬೊಬ್ಬಿಡುತ್ತಿದ್ದ ಮಗುವಿನ ಬಾಯಿಯ ಮೇಲೆ ಮೇಬಲ್ ಹಾಲಿನ ಬಾಟಲಿಯನ್ನು ಮೇಲ್ಮೇಲೆ ಹಾಯಿಸಿದಳು. ನಿಪ್ಪಲಿನ ಸ್ಪರ್ಶ ಆಗುತ್ತಿದ್ದಂತೆ ಮಗು ಒಮ್ಮೆಲೆ ತುಟಿಗಳನ್ನು ತೆರೆದು ನಿಪ್ಪಲನ್ನು ಒಳಗೆಳೆದುಕೊಂಡು ಸೊರಸೊರನೆ ಹಾಲು ಚೀಪತೊಡಗಿತು. ಅದರ ಅಳು ನಿಂತಿತ್ತು. ಹಾಲು ಚೀಪುವ ಸದ್ದು ಬಿಟ್ಟರೆ ಮನೆಯಲ್ಲಿ ಗಾಢ ಮೌನ ಕವಿದಿತ್ತು. ಮೇಬಲ್ ಮತ್ತು ಆಲ್ಬರ್ಟ್ ಬಿಟ್ಟ ಕಂಗಳಿಂದ ಮಗುವನ್ನೇ ನೋಡಹತ್ತಿದರು. ಅದು ಕಣ್ಣು ಮುಚ್ಚಿ ವೇಗವಾಗಿ ಹಾಲು ಎಳೆಯುತ್ತಿತ್ತು. ಅದರ ಎಳೆ ಮುಖದ ಮೇಲೆ ಸ್ವರ್ಗೀಯ ತೃಪ್ತಿ ಹರಡಿತ್ತು.

''ನಾನು ಅಂದಾಜಿಸಿದ್ದು ಸರಿಯಾಗೇ ಇತ್ತು.'' ಆಲ್ಬರ್ಟ್ ಹೇಳಿದ. ಮೇಬಲ್ ಏನೂ ಹೇಳಲಿಲ್ಲ. ಅವಳು ಹಾಲಿನ ಬಾಟಲನ್ನೇ ನೋಡುತ್ತಾ ಕುಳಿತಿದ್ದಳು. ಅವಳು ನೋಡುತ್ತಿದ್ದ ಹಾಗೇ ಮಗು ನಾಲ್ಕು ಔನ್ಸ್ ಹಾಲನ್ನು ಖಾಲಿ ಮಾಡಿತ್ತು.

''ದೇವರೇ!!'' ಮೇಬಲ್ ಉದ್ಗರಿಸಿ ಬಾಟಲನ್ನು ಹೊರತೆಗೆಯಲು ಕೈ ಹಾಕಿದಳು.

''ನಿನಗೆ ಸಾಧ್ಯವಾಗದು ಮೇಬಲ್... ಪುಟ್ಟಿಯ ಮುಖ ನೋಡಿದರೆ ಅವಳಿನ್ನೂ ಹಸಿದಿರುವಂತೆ ಕಾಣಿಸುತ್ತದೆ. ಕುಡಿಯಲಿ ಬಿಡು.''

''ಇದ್ಯಾಕೋ ನನಗೆ ಅಸಹಜ ಅನ್ನುವಂತೆ ಕಾಣಿಸುತ್ತೆ ಆಲ್ಬರ್ಟ್.''

''ನಮ್ಮ ಪುಟ್ಟಿ ಇದುವರೆಗಿನ ಲೆಕ್ಕವನ್ನು ಈಗ ಚುಕ್ತಾ ಮಾಡುತ್ತಿರುವಂತೆ ಕಾಣಿಸುತ್ತೆ.'' ಅವನು ನಗೆಯಾಡಿದ. ಐದು ನಿಮಿಷಗಳ ನಂತರ ಬಾಟಲು ಖಾಲಿಯಾಯ್ತು. ಬಾಟಲು ಬಿಡಿಸಿದಾಗ ಮಗು ಈ ಬಾರಿ ಪ್ರತಿರೋಧ ಮಾಡಲಿಲ್ಲ. ಅದರ ಮುಖದಲ್ಲಿ ತೃಪ್ತಿ ನೆಲೆಸಿತ್ತು. ತುಟಿಗಳು ಬಿರಿದಿದ್ದವು.

''ವಾಹ್, ಪೂರಾ ಹನ್ನೆರಡು ಔನ್ಸ್ ಮೇಬಲ್!'' ಆಲ್ಬರ್ಟ್ ಖುಷಿಯಿಂದ ಕುಪ್ಪಳಿಸಿದ. ಮೇಬಲ್ ಕೇಳಿಸಿಕೊಳ್ಳದವಳಂತೆ ಮಗುವನ್ನೇ ನೋಡುತ್ತಿದ್ದಳು. ಅವಳ ಹಣೆಯ ಮೇಲೆ ಚಿಂತೆಯ ಗೆರೆಗಳು ಮೂಡಿದ್ದವು.

''ನಿನಗೆ ಖುಷಿಯಾಗಿರುವಂತೆ ಕಾಣುತ್ತಿಲ್ಲ?'' ಅವನು ಕೇಳಿದ. "ಈ ವರೆಗೆ ಬರೇ ನಾಲ್ಕು ಔನ್ಸ್ ಹಾಲು ಕುಡಿಯುತ್ತಿದ್ದ ಮಗು ಬೆಳೆಯಬೇಕು ಅಂದರೆ ಹೇಗೆ?''

''ಇಲ್ಲಿ ಬಾ, ಆಲ್ಬರ್ಟ್.'' ಅವಳು ಕರೆದಳು. ಅವನು ಅವಳ ಬಳಿಗೆ ಹೋದ. ''ಮಗುವನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸು ಆಲ್ಬರ್ಟ್, ಏನಾದರೂ ವಿಶೇಷ ಕಾಣಿಸುತ್ತಿದೆಯಾ, ಹೇಳು.''

ಅವನು ಕೆಲಹೊತ್ತು ಮಗುವನ್ನೇ ಗಮನಿಸುತ್ತಾ, ''ಈಗ ಕೊಂಚ ಜೀವ ತುಂಬಿಕೊಂಡಿರುವವಳಂತೆ ಕಾಣುತ್ತಾಳೆ.''

''ಮಗುವನ್ನು ಕೊಂಚ ಎತ್ತಿ ನೋಡು?'' ಅವನು ಬಗ್ಗಿ ಅವಳ ಮಡಿಲಿನಿಂದ ಮಗುವನ್ನು ಎತ್ತಿಕೊಂಡ.

''ದೇವರೇ! ಮಗು ಇಷ್ಟೊಂದು ಭಾರವಾಗಿದೆಯಲ್ಲ!'' ಅವನು ಕೂಗುತ್ತಾ ಹೇಳಿದ. ''ಇದರಲ್ಲಿ ಆತಂಕಪಡೋದು ಏನಿದೆ ಮೇಬಲ್?! ಮಗು ಆರೋಗ್ಯವಾಗಿದೆ ಎಂದಾಯ್ತು."

''ನನಗೆ ಹೆದರಿಕೆ ಆಗ್ತಾ ಇದೆ ಆಲ್ಬರ್ಟ್. ಇಷ್ಟು ಬೇಗ ಇಷ್ಟೊಂದು ತೂಕ! ಇದಕ್ಕೆಲ್ಲ ಆ ದರಿದ್ರ ಜೇನು ಮೇಣನೇ ಕಾರಣ ಅಂತ ನನ್ನ ಅನಿಸಿಕೆ. ಆ ಮೇಣಾನ ನಾನು ಹೇಟ್ ಮಾಡ್ತೀನೀ ಆಲ್ಬರ್ಟ್.''

''ನೀನು ಅಷ್ಟೊಂದು ಹೇಟ್ ಮಾಡುವಂಥದ್ದು ಅದರಲ್ಲಿ ಏನೂ ಇಲ್ಲ. ನಿನಗೇನು ಗೊತ್ತು ಅದರ ಗುಣವಿಶೇಷ?'' ಅವನೂ ಏರಿದ ದನಿಯಲ್ಲಿ ಹೇಳಿದ.

''ನೀನು ಏನೇನೋ ಮಾತನಾಡಬೇಡ ಆಲ್ಬರ್ಟ್. ಬಡಕಲು ಮಗು ಸಡನ್ನಾಗಿ ಇಷ್ಟೊಂದು ಭಾರ ಬೆಳೆಸಿಕೊಂಡಿರುವುದು ನಿನಗೆ ಸಹಜವಾಗಿ ಕಾಣಿಸುತ್ತ?''